International Journal of Kannada Research
www.kannadajournal.com

ISSN: 2454–5813
IJSR 2017; 3(1): 49-51
© 2017 IJKS
www.kannadajournal.com
Received: 11-11-2016
Accepted: 12-12-2016

**ಶ್ರೀ ವಾಯ್.ಎ. ಜಕ್ಕಣ್ಣವರ**
ಸಂಶೋಧನಾ ವಿದ್ಯಾರ್ಥಿ,
ಶಾಸ್ತ್ರೀಯ ಕನ್ನಡ ಅಧ್ಯಯನ
ಸಂಸ್ಥೆ, ರಾಣಿ ಚನ್ನಮ್ಮ
ವಿಶ್ವವಿದ್ಯಾಲಯ, ಬೆಳಗಾವಿ

**ಮಾರ್ಗದರ್ಶಕರು ಡಾ॥ ಲಿಂಗರಾಜ**
ಮಹಾವಿದ್ಯಾಲಯ ಬೆಳಗಾವಿ

**Correspondence**
**ಶ್ರೀ ವಾಯ್.ಎ. ಜಕ್ಕಣ್ಣವರ**
ಸಂಶೋಧನಾ ವಿದ್ಯಾರ್ಥಿ,
ಶಾಸ್ತ್ರೀಯ ಕನ್ನಡ ಅಧ್ಯಯನ
ಸಂಸ್ಥೆ, ರಾಣಿ ಚನ್ನಮ್ಮ
ವಿಶ್ವವಿದ್ಯಾಲಯ, ಬೆಳಗಾವಿ

# ಕನ್ನಡ ರಂಗಭೂಮಿಯ ವೈಶಿಷ್ಟ್ಯತೆ

**ಶ್ರೀ ವಾಯ್.ಎ. ಜಕ್ಕಣ್ಣವರ, ಮಾರ್ಗದರ್ಶಕರು ಡಾ॥ ಕೆ.ಆರ್.ಸಿದ್ದಗಂಗಮ್ಮ**

ಕನ್ನಡ ರಂಗಭೂಮಿ ಜನಪದ, ವೃತ್ತಿ, ಹವ್ಯಾಸಿ ಎಂಬ ಮೂರು ನೆಲೆಗಳಲ್ಲಿ ಶ್ರೀಮಂತ ಪರಂಪರೆಯನ್ನು ಹೊಂದಿದೆ. ಸಾಹಿತ್ಯ, ಸಂಗೀತ, ಅಭಿನಯಗಳಿಂದ ಸಂಮ್ಮಿಳಿತಗೊಂಡಿದೆ. ರಂಗಭೂಮಿ ಹಲವು ಏಳು ಬೀಳುಗಳನ್ನು ಕಾಣುತ್ತ ಹೊಸತನವನ್ನು ಮೈಗೂಡಿಸಿಕೊಂಡಿದ್ದು, ಸದಾಕಾಲ ಸಮಾಜವನ್ನು ಸನ್ಮಾರ್ಗದಲ್ಲಿ ನಡೆಸುತ್ತ ಸಾಂಸ್ಕೃತಿಕ ಭದ್ರನೆಲೆಯನ್ನು ಸೃಷ್ಟಿಸುತ್ತಿದೆ. ಸತ್ಯ, ನ್ಯಾಯ, ನೀತಿ ಸಂದೇಶ ಸಾರುತ್ತ ಉತ್ತಮ ಸಮಾಜ ನಿರ್ಮಾಣದ ಕಾರ್ಯವನ್ನು ಅವಿರತವಾಗಿ ಮಾಡುತ್ತ ಬಂದಿದೆ.

ಕರ್ನಾಟಕ ಪ್ರಾಚೀನ ಪರಂಪರೆಯಿಂದಲೂ ರಂಗಭೂಮಿ ಚರಿತ್ರೆ ಜೀವಂತವಾಗಿದೆ ರಂಗಭೂಮಿಯನ್ನು ಉಳಿಸಿ ಬೆಳೆಸಲು ಹಲವು ಸಂಘ ಸಂಸ್ಥೆಗಳನ್ನು ಕಟ್ಟಿಕೊಂಡು ತನು–ಮನ–ಧನಗಳಿಂದ ಭಕ್ತಿ–ಭಾವದಿಂದ ವೃತ್ತಿಯಾಗಿ ಪ್ರವೃತ್ತಿಯಾಗಿ ಬದುಕನ್ನೇ ಈ ಕ್ಷೇತ್ರಕ್ಕೆ ಮೀಸಲಿಟ್ಟ ಮಹನೀಯರನ್ನು ಈ ನೆಲೆಯಲ್ಲಿ ಕಾಣಬಹುದು.

ಸಮಗ್ರ ಕರ್ನಾಟಕ ರಂಗಭೂಮಿಯನ್ನು ಸ್ಥೂಲವಾಗಿ ಹಲವು ವಿಭಾಗಗಳಾಗಿ ವಿಂಗಡಿಸಬಹುದು.

- ಜನಪದ ರಂಗಭೂಮಿ
- ವೃತ್ತಿ ರಂಗಭೂಮಿ
- ಹವ್ಯಾಸಿ ರಂಗಭೂಮಿ

**ಜನಪದ ರಂಗಭೂಮಿ**

ಜನಪದ ರಂಗಭೂಮಿ ಬಯಲಾಟ ಎನ್ನುವರು ಸಾಹಿತ್ಯ ಮತ್ತು ಸಂಗೀತ ಹಾಗೂ ಕುಣಿತಗಳೊಂದಿಗೆ ಮೈಗೂಡಿಸಿಕೊಂಡು ಬಂದಿರುವ ಜನಪದ ರಂಗಭೂಮಿಯ ಈ ನಾಟಕಗಳು ಸಂಪೂರ್ಣ ದೇಶಿಯತೆಯ ಸತ್ವವನ್ನು ಅಳವಡಿಸಿಕೊಂಡು ಬೆಳೆದು ಬಂದಿರುತ್ತದೆ. ಹೀಗಾಗಿ ಜನಪದ ರಂಗಭೂಮಿ ನಮ್ಮ ಸಂಸ್ಕೃತಿಯ ಅವಿಭಾಜ್ಯ ಅಂಗವಾಗಿವೆ. ಕರ್ನಾಟಕದ ಹಳ್ಳಿ–ಹಳ್ಳಿಗಳಲ್ಲೂ ಉಳಿದು ಬೆಳೆದು ಬಂದಿರುವ ಬಯಲಾಟಗಳನ್ನು ಜನಪದರಂಗ ಭೂಮಿಯೆಂದು ಕರೆಯುತ್ತಾರೆ.

ಬಯಲಾಟಗಳು ದೇವಸ್ಥಾನದಲ್ಲಿ ಪ್ರಯೋಗಕ್ಕೊಳಪಟ್ಟು ಬೆಳೆದು ಬಂದಿವೆ ದೇವಸ್ಥಾನದ ಗರ್ಭಗುಡಿಯ ಮುಂದೆ ನವರಂಗ ಇರುತ್ತಿದ್ದು ಅದರ ಸುತ್ತಲೂ ಪ್ರೇಕ್ಷಕ ಸಮುದಾಯ ನೆರವೇರುತ್ತಿತ್ತು. ಬರ ಬರುತ್ತ ದೇವಾಲಯದಿಂದ ದೂರ ಸರಿದು ಬಯಲಿಗೆ ಬಂದಿದೆ ಬಯಲಲ್ಲಿ ಅಟ್ಟ ಕಟ್ಟಿ ಈ ನಾಟಕವನ್ನು ಆಡಲು ತೊಡಗಿದ್ದರಿಂದ ಇದಕ್ಕೆ ಬಯಲಾಟ ಎಂದು ಹೆಸರು ಬಂದಿದೆ.

ಹೀಗೆ ಜನಪದ ರಂಗಭೂಮಿ ಸ್ಥಳೀಯ ಭಾಷೆಗಳಲ್ಲಿ ಬೆಳೆದುಬಂದರೂ ಹಲವು ಶತಮಾನಗಳ ಕಾಲ ಭಕ್ತಿ ಪಂಥದ ಪ್ರಭಾವ ಜಾನಪದ ರಂಗಭೂಮಿಯನ್ನು ಜೀವಂತವಾಗಿ ಉಳಿಸಿ ವೈವಿಧ್ಯಮಯವಾಗಿ ಬೆಳೆಸಿತು. ಕನ್ನಡ ಜನಪದ ರಂಗಭೂಮಿಯಲ್ಲಿ ಬಯಲಾಟವನ್ನು ವಿವಿಧ ವಿಭಾಗಗಳನ್ನು ಪ್ರಾದೇಶಿಕತೆಗೆ ತಕ್ಕಂತೆ ಕಥಾವಸ್ತುವನ್ನಾಧರಿಸಿ ದೊಡ್ಡಾಟ, ಸಣ್ಣಾಟ, ಶ್ರೀ ಕೃಷ್ಣ ಪಾರಿಜಾತ ಹೀಗೆ ಹಲವು ಪ್ರಕಾರಗಳನ್ನು ಪಡೆದು ಹಲವು ಸ್ವತಂತ್ರ ಕಲೆಗಳನ್ನು ಸೇರಿಸಿಕೊಂಡು ಸಮ್ಮಿಶ್ರ ಕಲೆಯೊಂದನ್ನು ನಿರ್ಮಿಸಿ, ವಿಭಿನ್ನ ಅಭಿರುಚಿಯ ಪ್ರೇಕ್ಷಕರಿಗೆ ಮನರಂಜನೆ ನೀಡುತ್ತ ವೈವಿಧ್ಯಮಯವಾಗಿ ಕಾಣಿಸಿಕೊಂಡಿವೆ.

**ದೊಡ್ಡಾಟ:**

ಜನಪದರು ಜಾತ್ರೋತ್ಸವ, ಹಬ್ಬ ಹರಿದಿನಗಳಲ್ಲಿ ಗ್ರಾಮೀಣ ಭಾಗದ ಜನರು ತಮ್ಮ ಮನರಂಜನೆಗಾಗಿ ದೊಡ್ಡಾಟದಂತಹ ಆಟಗಳನ್ನು ಪ್ರದರ್ಶಿಸುತ್ತಿದ್ದರು. ಮನರಂಜನೆಯೇ ಇದರ ಉದ್ದೇಶವಾದರೂ ವೀರತನ, ಶೂರತನಕ್ಕೆ ಪ್ರಚೋದನೆಯನ್ನು ಪ್ರೇರಪಿಸುವ ಕಥಾವಸ್ತುವನ್ನು ಹೊಂದಿರುತ್ತದೆ. ಇವು ಪೌರಾಣಿಕ ಹಿನ್ನೆಲೆಯನ್ನು ಹೊಂದಿದ್ದು ಇದರಲ್ಲಿ ಶಿಷ್ಠ ರಕ್ಷಕ ದುಷ್ಟ ಸಂಹಾರ ತತ್ವ ಸಂದರ್ಭೋಚಿತವಾಗಿ ಕಂಡು ಬರುತ್ತದೆ.

ದೊಡ್ಡಾಟದಲ್ಲಿ ಅಟ್ಟಹಾಸದ ಕುಣಿತ ಭರ್ಜರಿ ವೇಷ-ಭೂಷಣ, ಹೃದಯ ತನಿಸುವ ಹಾಡುವರಿಕೆ ಪ್ರಾಸಬದ್ಧವಾದ ಉದ್ದುದ್ದವಾದ ಮಾತುಗಳು ನಡು-ನಡುವೆ ಸಾರಥಿಯ ಹಾಸ್ಯದ ಮಾತುಗಳು ಮುಮ್ಮೇಳ ಹಿಮ್ಮೇಳ ಹಾಡಿನ ಸುರಿಮಳೆ, ವಾದ್ಯ-ತಾಳಗಳ ಬಡಿತ ಇವುಗಳಿಂದ ರಂಗೇರುತ್ತ ಬೆಳಗಿನವರೆಗೂ ನಡೆಯುತ್ತವೆ. ಒಂದು ಕಾಲದಲ್ಲಿ ಜನಮಾನಸದಲ್ಲಿ ಮನೆ ಮಾಡಿದ ದೊಡ್ಡಾಟ ಪ್ರಾದೇಶಿಕ ಬೇಧದಿಂದಾಗಿ ಉತ್ತರ ಕರ್ನಾಟಕ್ಕೆ ಮಾತ್ರ ಸೀಮಿತವಾಗಿ ಯಕ್ಷಗಾನಕ್ಕೆ ಸಿಕ್ಕ ಸಂಸ್ಕಾರ, ಪುರಸ್ಕಾರ ರಾಷ್ಟ್ರೀಯ, ಅಂತರಾಷ್ಟ್ರೀಯ ಮಾನ್ಯತೆ ದೊರೆಯದೆ ಇಂದು ನಿಧಾನವಾಗಿ ಕಣ್ಮರೆಯಾಗುತ್ತಿದೆ.

**ಸಣ್ಣಾಟ**

ಸುಮಾರು ೬೦ ವರ್ಷಗಳಿಂದ ವೃತ್ತಿ ರಂಗಭೂಮಿಯ ಪರದೆ ರಂಗಸಜ್ಜಿಕೆ, ಪಾತ್ರ ವೇಷ-ಭೂಷಣಗಳಿಂದ ಬೆಳೆದು ಬಂದ ಸಣ್ಣಾಟ ಉತ್ತರ ಕರ್ನಾಟಕದ ಹಳ್ಳಿಯ ನಾಟಕ ಪದ್ಧತಿಯಾಗಿದೆ. ಉತ್ತರ ಕರ್ನಾಟಕದ ಜನಪದ ರಂಗಭೂಮಿಯಲ್ಲಿ ಸಣ್ಣಾಟ ಭಕ್ತಿಯ ಸೆಲೆಯಾಗಿ ಬಂದಿದ್ದು "ದಪ್ಪಿನಾಟ" ಎಂದು ಕರೆಯುತ್ತಾರೆ. ಸಣ್ಣಾಟದ ರಂಗಭೂಮಿ ಚಿಕ್ಕದಾಗಿದ್ದು ಪಾತ್ರಗಳು ಕಡಿಮೆ ಇರುತ್ತವೆ. ಚಾರಿತ್ರಿಕ, ಭಕ್ತಿ, ಸಾಮಾಜಿಕ ಸ್ಪಂದನೆ ಇದರೊಂದಿಗೆ ನಿತ್ಯ ಜೀವನದಲ್ಲಿ ನಡೆಯುವ ನೈಜ ಘಟನೆಗಳನ್ನು ತಮ್ಮ ಸಂದರ್ಭಕ್ಕೆ ತಕ್ಕಂತೆ ಉಪಯೋಗಿಸಿಕೊಂಡು ಜನ ಸಾಮಾನ್ಯರ ಹೃದಯ ಸ್ಪರ್ಶಿಯಾಗಿದೆ.

**ಶ್ರೀ ಕೃಷ್ಣ ಪಾರಿಜಾತ**

ಗದ್ಯ-ಪದ್ಯ ಮಿಶ್ರಿತವಾಗಿ ಪಾತ್ರ, ಸಂಭಾಷಣೆ, ಸಂಗೀತ, ಹೀಗೆ ವೈವಿಧ್ಯತೆಯಿಂದ ಕೂಡಿದ ಶ್ರೀ ಕೃಷ್ಣ ಪಾರಿಜಾತವನ್ನು ದೃಶ್ಯ ಮಾಧ್ಯಮವನ್ನಾಗಿ ಮಾಡಿ ರಂಗ ಕಲ್ಪನೆಯನ್ನು ಪ್ರೇಕ್ಷಕರಲ್ಲಿ ಮೂಡಿಸುತ್ತಾ ಬಂದಿರುವುದರಿಂದ ಜನಪದ ರಂಗಭೂಮಿ ಕಲಾವಿದರ ಪರಿಶ್ರಮದ ವಿಶೇಷತೆ ಪಡೆದಿದೆ. ಕೃಷ್ಣನ ಕಪಟಾಭಿನಯ, ನಾರದನ ಕುತಂತ್ರ, ಸವತಿಯ ಮಾತ್ಸರ, ಕೃಷ್ಣನ ಅವತಾರಗಳು, ಕೊರವಂಜಿಯ ಕೈಚಳಕ, ಭಾಮಿನಿ ರುಕ್ಮಣಿಯರ ನಡುವೆ ಕೃಷ್ಣನ ಗೋಳಾಟ, ಪ್ರೇಮ, ಶೃಂಗಾರ, ಭಕ್ತಿ, ರೋಷಗಳಿಂದ ಕೂಡಿ ಕೂತುಹಲವನ್ನುಂಟು ಮಾಡಿ, ಕೂಡಿ ಅಗಲಿ ಮತ್ತೆ ಕುಡುವ ಒಂದು ಕಥಾ ಹಂದರ ಕಥೆಯೆ ಶ್ರೀ ಕೃಷ್ಣ ಪಾರಿಜಾತ.

ರಾಯಚೂರ ಜಿಲ್ಲೆಯ ಅಪರಾಳ ಗ್ರಾಮದ 'ಅಪರಾಳ ತಮ್ಮನನ್ನು' ಪಾರಿಜಾತದ ಪೂರ್ವಾರ್ಧರ್ಮವನ್ನು, ಉತ್ತಾರರ್ಧವನ್ನು 'ಶಿರಗುಪ್ಪಿ ಸದಾಶಿವಯ್ಯ' ಬರೆದಿರುವರೆಂದು ಮುಂದೆ ಗೋಕಾಕ ತಾಲೂಕಿನ ಕುಲಗೋಡ ತಮ್ಮನನೆಂಬುವನು ಕಲಾವಿದರನ್ನು ಸೇರಿಸಿ ಪಾರಿಜಾತವನ್ನು ಕಲಿಸಿ ರಂಗಭೂಮಿಯ ಮೇಲೆ ಯಶಸ್ವಿಯಾಗಿ ಪ್ರಯೋಗಿಸಿದ ಎಂದು ಸಂಶೋಧನೆಗಳಿಂದ ತಿಳಿದು ಬಂದಿದೆ. ಇವತ್ತು ಕೂಡಾ ಶ್ರೀ ಕೃಷ್ಣ ಪಾರಿಜಾತವನ್ನು ೫ ದಿನಗಳವರೆಗೆ ಪ್ರಯೋಗಿಸುವ ತಂಡಗಳು ಉತ್ತರ ಕರ್ನಾಟಕದಲ್ಲಿ ಇವೆ.

ಗ್ರಾಮೀಣ ಭಾಗದಲ್ಲಿ ಇನ್ನು ಜನಮನದಲ್ಲಿ ಅಧ್ಯಾತ್ಮಿಕತೆ ಒಲವು ಇರವುದರಿಂದ ಸಹಜವಾಗಿಯೇ ಪಾರಿಜಾತ ಬೇರೂರಿದೆ. ಅತ್ಯಂತ ಕಡಿಮೆ ವೆಚ್ಚದಲ್ಲಿ ಸುಲಭ ಪರಕರದಲ್ಲಿ ಸೀಮಿತ ಕಲಾವಿದರಿಂದ ಪ್ರದರ್ಶಿಸಲು ಸಾಧ್ಯವಿರುವುದರಿಂದ ಪಾರಿಜಾತಕ್ಕೆ ಹೆಚ್ಚಿನ ವಿಶೇಷತೆ ಇದೆ.

**ಕನ್ನಡ ವೃತ್ತಿ ರಂಗಭೂಮಿ**

ನಮ್ಮ ನಾಟಕ ಪರಂಪರೆಯಲ್ಲಿ ನಾಟಕದ ಮೂಲ ಉದ್ದೇಶ ಮನರಂಜನೆಯಾಗಿದ್ದರಿಂದ ನಾಟಕವನ್ನು ಹಣಕೊಟ್ಟು ನೋಡುವುದು ಎಂದಿಗೂ ಇರಲಿಲ್ಲ ನಾಟಕ ಮಂಡಳಿಗಳನ್ನು ಒಂದು ಉದ್ಯಮದಂತೆ ಬಂಡವಾಳಗಳನ್ನು ಹೂಡಿ ಸಂಘಟಿಸುವ ವ್ಯವಹಾರಿಕ ಮಾಧ್ಯಮವನ್ನಾಗಿಸುವ ಜವಾಬ್ದಾರಿ ಕೂಡ ಇರಲಿಲ್ಲ ಆದರೆ ಹದಿನೆಂಟನೆ ಶತಮಾನದ ಕೊನೆಯ ವೇಳೆಯಲ್ಲಿ ಪಾಶ್ಚಾತ್ಯರ ನಾಟಕ ಕಂಪನಿಯ ಪ್ರಭಾವಕ್ಕೆ ಒಳಪಟ್ಟು ಕಲ್ಕತ್ತಾ, ಮುಂಬೈ, ಮುಂತಾದ ನಗರದಲ್ಲಿ ಆರಂಭವಾದ ಈ ವೃತ್ತಿ ರಂಗಭೂಮಿ ಕ್ರಮೇಣ ಭಾರತದ ತುಂಬೆಲ್ಲ ಆವರಿಸಿಕೊಂಡಿತು. ಹೀಗೆ ನಾಟಕ ಆಡುವದನ್ನು ವೃತ್ತಿಯಾಗಿ ಅದೇ ತನ್ನ ಕೆಲವನ್ನಾಗಿ ಮಾಡಿಕೊಮಡವರಿಂದ ಹುಟ್ಟಿಕೊಂಡ ರಂಗಭೂಮಿ ಮುಂದೆ ವೃತ್ತಿ ರಂಗಭೂಮಿ ಎಂದು ಕರೆಯಿಸಿಕೊಂಡಿತು.

ರಂಗಸಜ್ಜಿಕೆ, ವೈವಿಧ್ಯತೆ, ದೀಪಾಲಂಕಾರಗಳಲ್ಲದೇ ರಂಗ ತಂತ್ರಗಳು ತುಂಬಿಕೊಂಡು ಮನರಂಜನೆ ಒದಗಿಸುವುದು ಕಂಪನಿ ನಾಟಕಗಳ ಮೂಲ ಉದ್ದೇಶವಾಗಿತ್ತು ನಾಟಕವನ್ನೇ ವೃತ್ತಿಯಾಗಿಟ್ಟುಕೊಂಡಿದೆ. ಸಂಸ್ಥೆಯ ಎಲ್ಲ ಸದಸ್ಯರಿಗೂ ಸಂಬಳ ಕೊಡುವ ಪದ್ಧತಿ ಇದ್ದು ಅದರಂತೆಯೇ ಅವರ ಜೀವನ ನಿರ್ವಹಣೆಯಾಗಬೇಕಾಗಿತ್ತು. ಇದಕ್ಕಾಗಿ ನಾಟಕಗಳಿಗೆ ಟಿಕೇಟು ಕೊಡುವ ಪದ್ಧತಿ ಬೆಳೆದು ಬಂದಿದೆ. ಖುರ್ಚಿ, ಬೆಂಚು, ಜಾಪೆ, ನೆಲ ಇವಕ್ಕೆ ಹೊಂದುವಂತೆ ಬೆಲೆಯನ್ನು ನಿಗದಿಪಡಿಸಿ ಎಲ್ಲಾ ವರ್ಗದವರಿಗೂ ಮನರಂಜನೆ ನೀಡುವ ಉದ್ದೇಶ ಕಂಪನಿ ನಾಟಕಗಳಲ್ಲಿತ್ತು.

ಕನ್ನಡ ಜನಪದ ರಂಗಭೂಮಿಯಿಂದ ಪ್ರೇರಣೆ ಪಡೆದು ಮರಾಠಿಯ ವಿಷ್ಣುದಾಸ ಭಾವೆಯವರ ಸ್ಫೂರ್ತಿಯಿಂದ "ಸೀತಾ ಸ್ವಯಂವರ" ನಾಟಕ ಮಹಾರಾಷ್ಟ್ರದಲ್ಲಿ ಯಶಸ್ವಿಯಾಗಿ ಪ್ರದರ್ಶನ ಕಂಡು ಮುಂಬೈ ಪ್ರಾಂತ್ಯದ ಆಡಳಿತಕ್ಕೊಳಪಟ್ಟ ಉತ್ತರ ಕರ್ನಾಟಕ ಪ್ರಮುಖ ಪಟ್ಟಣಗಳಲ್ಲಿಯ ಜನರನ್ನು ಆಕರ್ಷಿತು. ಹೀಗೆ ಮರಾಠಿ ಮತ್ತು ಪಾರ್ಸಿ ನಾಟಕ ಮಂಡಳಿಯ ನಾಟಕ ಪ್ರದರ್ಶನಗಳಿಗೆ ಮಾರು ಹೋದ ಕನ್ನಡಿಗರ ಮನದಲ್ಲಿ ನಾಲಿಗೆಯಲ್ಲಿ ಮರಾಠಿ, ಹಿಂದಿ ಹಾಡುಗಳು ನಿರಂತರವಾಗಿ ನಲಿಯತೊಡಗಿದವು.ನಿತ್ಯ ಜೀವನದಲ್ಲಿನ ವಸ್ತ್ರ ಭೂಷಣಗಳು ಮಾರ್ಪಟ್ಟವು ಹೀಗೆ ಕನ್ನಡಿಗರ ಸಿರಿ-ಸಂಪತ್ತು ಹಾಗೂ ಕನ್ನಡ ನೆಲದ ಮೇಲಿನ ಸಾಂಸ್ಕೃತಿಕ ದಾಳಿಯನ್ನು ಮಾಡಲು ಅವಕಾಶ ಮಾಡಿಕೊಟ್ಟಿತ್ತು. ಇದು ಕನ್ನಡಿಗರ ಸ್ವಾಭಿಮಾನದ ಕೆಣಕುವಂತಾಯಿತು. ಈ ಸಂದರ್ಭದಲ್ಲಿ "ಶಾಂತಕವಿ" ಎಂದು ಹೆಸರಾದ ಸಕ್ಕರೆ ಬಾಳಾಚಾರರು ಮರಾಠಿ ನಾಟಕಕ್ಕೆ ಪ್ರತಿಯಾಗಿ ಕನ್ನಡ ನಾಟಕಗಳನ್ನು ಗದುಗಿನ ಶ್ರೀಮಂತ ಉಣಚಗಿ ಲಕ್ಕಪ್ಪನಾಯಕ ಎಂಬುವರ ಪ್ರೋತ್ಸಾಹದಿಂದ 'ವೀರ ನಾರಾಯಣ ಪ್ರಸಾದಿಕ ಕೃತಕಪುರ ಮಂಡಳಿ' ಸ್ಥಾಪಿಸಿದರು. ಹೀಗೆ ಶಾಂತಕವಿಗಳು ಕನ್ನಡ ವೃತ್ತಿರಂಗಭೂಮಿಯ ಮೊದಲ ನಾಟಕ ಕಂಪನಿಯ ಉಗಮ ಮತ್ತು ರಚನೆಗೆ ನಾಂದಿ ಹಾಡಿದರು.

ಇದೇ ಕಾಲಕ್ಕೆ ಮೈಸೂರು ಚಾಮರಾಜೇಂದ್ರ ಒಡೆಯರು ಜನರು ಪಾರ್ಸಿ ಕಂಪನಿಗಳತ್ತ ವಾಲುವುದನ್ನು ತಡೆಯುದಕ್ಕಾಗಿ ಕನ್ನಡಿಗರ ಮೇಲಿನ ಸಾಂಸ್ಕೃತಿಕ ದಾಳಿ ತಡೆಗಟ್ಟಲು ೧೮೮೦ ರಲ್ಲಿ ಸಿ.ಆರ್.ರಘುನಾಥ ರಾಯರ ನೇತೃತ್ವದಲ್ಲಿ 'ಕರ್ನಾಟಕ ನಾಟಕ ಸಭಾ' ಎಂಬ ಕನ್ನಡ ನಾಟಕ ಸಂಘವನ್ನು ಕಟ್ಟಿ ಬೇರೆ-ಬೇರೆ ಪ್ರದೇಶದ ಅನೇಕ ಉತ್ಸಾಹಿ ಕಲಾವಿದರನ್ನು ಕರೆಯಿಸಿ ಹಲವು ನಾಟಕಗಳನ್ನು ಬರೆಯಿಸಿ ಪ್ರದರ್ಶಿಸಿ ರಂಗಭೂಮಿಯ ಇತಿಹಾಸದಲ್ಲಿ ಹೊಸ ಮೈಲುಗಲ್ಲ ಸ್ಥಾಪಿಸಿದರು.

ಹೀಗೆ ಕನ್ನಡಿಗರಲ್ಲಿ ಸ್ವಾಭಿಮಾನವನ್ನು ಮೂಡಿಸುವುದು ಉತ್ತರ ಕರ್ನಾಟಕದ ವೃತ್ತಿ ರಂಗಭೂಮಿಯ ಉದ್ದೇಶವಾದರೆ, ಮನರಂಜನೆ ಮೂಲಕ ಜನರ ಜೀವನವನ್ನು ಸಂಸ್ಕರಿಸುವ ಉದ್ದೇಶ ಮೈಸೂರು ಪ್ರಾಂತ್ಯದವರಾಗಿತ್ತು. ಒಂದಕ್ಕೆ ರಾಜ್ಯಾಶ್ರಮ ಇತ್ತು, ಇನ್ನೊಂದಕ್ಕೆ ಜನಾಶ್ರಮ ಇತ್ತು. ಇದರಿಂದಲೇ ಉತ್ತರ ಕರ್ನಾಟಕ ವೃತ್ತಿ ರಂಗಭೂಮಿ ಮೈಸೂರು ವಿಭಾಗದ ವೃತ್ತಿ ರಂಗಭೂಮಿಗಿಂತ ಬಹುಬೇಗ ಜನಸಾಮಾನ್ಯರು ಸ್ಪಂದಿಸುವಂತಾಯಿತು. ಮೈಸೂರು ವಿಭಾಗದ ಕೆಲವು ನಾಟಕ ಕಂಪನಿಗಳು ಉತ್ತರ ಕರ್ನಾಟಕದಲ್ಲಿ ಸಂಚರಿಸಿ, ಉತ್ತರ ಕರ್ನಾಟಕದ ಹಲವು ನಾಟಕ ಕಂಪನಿಗಳು ಮೈಸೂರು ವಿಭಾಗದಲ್ಲಿ ಸಂಚರಿಸಿ ಬೇರೆ-ಬೇರೆ ಆಡಳಿತ ಪ್ರಾಂತ್ಯಗಳಿಗೆ ಹರಿದು ಹಂಚಿ ಹೋಗಿದ್ದ ಕರ್ನಾಟಕದ ಪ್ರದೇಶಗಳಲ್ಲಿ ಸಾಂಸ್ಕೃತಿಕ ಸಂಬಂಧ ಮತ್ತು ಸಾಮರಸ್ಯವನ್ನು ಸಾಧಿಸಿ ಆಗಿನ ಮಹಾರಾಷ್ಟ್ರ.

ಹೀಗೆ ಶಾಲಾ-ಕಾಲೇಜು, ವಿಶ್ವವಿದ್ಯಾಲಯಗಳ ಹಂತದಲ್ಲಿ ನಾಟಕದಲ್ಲಿ ಪ್ರಯೋಗಗೊಳ್ಳುತ್ತಾ ಪ್ರತಿವರ್ಷ ಹವ್ಯಾಸಿ ರಂಗಭೂಮಿ ಹೊಸತನವನ್ನು ಹುಡುಕುವ ಪ್ರಯತ್ನದಲ್ಲಿ ಮುಂದು ಸಾಗುತ್ತಿವೆ. ಇತ್ತೀಚಿನ ದಿನಗಳಲ್ಲಿ ರಂಗಭೂಮಿಗೆ ಜೀವಾಳವಾಗಿ ರಂಗಸೇವೆಯೇ ವೃತ್ತಿಯಾಗಿರುವ ೧೯೮೯ ರಲ್ಲಿ ಹೆಸರಾಂತ ರಂಗ ನಿರ್ದೇಶಕ ಬಿ.ವ್ಹಿ.ಕಾರಂತರ ನೇತೃತ್ವದಲ್ಲಿ ಮೈಸೂರಿನ ರಂಗಾಯಣ ಹಾಗೂ ರಂಗಭೂಮಿ ತಜ್ಞರಾದ ಕೆ.ವಿಸುಬ್ಬಣರ ನೇತೃತ್ವದಲ್ಲಿ ಹೆಗ್ಗೂಡಿನ ನಿನಾಸಂ (ನೀಲಕಂಠೇಶ್ವರ ನಾಟ್ಯ ಸಂಘ) ಸಂಸ್ಥೆಗಳಲ್ಲಿ ಹೆಸರಾತ ನಿರ್ದೇಶಕರು, ನಾಟಕಕಾರರು, ನಟರಿಗೆ, ರಂಗಭೂಮಿಯಲ್ಲಿ ತರಬೇತಿ ನೀಡುತ್ತಾ ಪ್ರತಿವರ್ಷ ರಂಗೋತ್ಸವದ ಮೂಲಕ ಇಡೀ ಕರ್ನಾಟಕದಾದ್ಯಂತ ರಂಗ ಪ್ರದರ್ಶನ ನೀಡುತ್ತಾ ರಂಗಭೂಮಿಯುತ್ತ ಜನರ ಸೆಳೆಯುತ್ತ ದೇಶ ವಿದೇಶಗಳಲ್ಲಿ ನಾಟಕ ಪ್ರದರ್ಶಿಸಿ ಕರ್ನಾಟಕದ ಕೀರ್ತಿಯನ್ನು ಪಸರಿಸಿದ್ದಾರೆ.

**ಆಕಾರ ಗ್ರಂಥಗಳು**


1. ಕನ್ನಡ ರಂಗಭೂಮಿ ವಿಕಾಸ-ಡಾ.ಎಚ್.ಕೆ.ರಾಮನಾಥ
2. ಉತ್ತರ ಕರ್ನಾಟಕದ ಬಯಲಾಟಗಳು-ಡಾ.ಬಸವರಾಜ ಮಲಶೆಟ್ಟಿ
3. ವೃತಿ ರಂಗದರ್ಶನ-ಎಚ್.ಕೆ.ರಂಗನಾಥ
4. ಜನಪದ ಸ್ವರೂಪ-ಡಾ. ಹಾ.ಮಾ.ನಾಯಕ
5. ಶ್ರೀ ಕೃಷ್ಣ ಪಾರಿಜಾತ-ಎಂ.ಎಸ್.ಸುಂಕಾಪೂರ